they should have made up the deficit by borrowing from the Government.

ಶ್ರೀ ಜಿ. ಶಿವಪ್ಪ.—ಚಿತ್ರದುರ್ಗದಲ್ಲಿ ಕಟ್ಟಿರುವ ಒಂದು ದೊಡ್ಡ ಗೋಡೌನನ್ನು ಅಲ್ಲಿನ ರೇಗ್ಯುಲೇ ಟೆಡ್ ಮಾರ್ಕೆಟ್ಟಿಗೆ ಕೊಡುತ್ತೀವೆಂದು ಮಾನ್ಯ ಮಂತ್ರಿಗಳು ಒಂದು ಸಲಹೆ ಹೇಳಿದ್ದರು. ಅದರಂತೆ ಅದನ್ನು ಕೊಡುತ್ತೀರಾ ?

ಡಾ॥ ಆರ್. ನಾಗನಗೌಡ.—ವಿಚಾರಿಸುತ್ತೇನೆಂದು ಹೇಳಿದೆ.

Sri G. SIVAPPA—On account of the decontrol of food grains that godown is lying unused. Will the Government hand over this to the market ?

Dr. R. NAGAN GOWDA.—I will look into that question.

Drinking Water wells for Banavase village, Belagodu Hobli, Sakalespur Taluk.

Q.—67. Sri H. K. SIDDAIYA (Belur—Scheduled Castes).—

Will the Government be pleased to state :—

(*a*) the number of applications that have been received for public drinking water wells from the residents of Banavase village, Belagodu Hobli, Saklespur Taluk ;

(*b*) whether they will provide wells as early as possible in view of the fact that inconvenience is being felt due to water scarcity during summer by this thickly populated area ?

A.—Sri T. CHANNIAH (Minister for Public Health and Local Self-Government).—

(*a*) Four.

(*b*) One well has been sanctioned to Ballupet village which is contiguous to Banavase village.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಬಾವಿ ಮಂಜೂರಾಗಿ ಎಷ್ಟು ದಿವಸವಾಯಿತು ?

ಶ್ರೀ ಟಿ. ಚನ್ನಯ್ಯ.—ಯಾವ ತಾರೀಖಿನಲ್ಲಿ ಮಂಜೂರಾಯಿತೆಂಬುದು ಜ್ಞಾಪಕವಿಲ್ಲ, ವಿವರ ಬೇಕಾದರೆ ತಿಳಿದು ಆಮೇಲೆ ಹೇಳುತ್ತೇನೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಬಾವಿಗಳನ್ನು ಮಂಜೂರು ಮಾಡುವಾಗ ಸರ್ಕಾರ ಅನುಸರಿಸುವ ನೀತಿಯೇನು ?

ಶ್ರೀ ಟಿ. ಚನ್ನಯ್ಯ.—ಎಲ್ಲಿ ಕುಡಿಯುವ ನೀರಿನ ಬಾವಿಯಿಲ್ಲವೋ ಅಲ್ಲಿಗೆ ಕೊಡಬೇಕೆಂಬುದು.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಬಾವಿಗೆ ಪಂಚಾಯಿತಿಯಿಂದ ಏನಾದರೂ ಹಣಕೊಡಬೇಕೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಎಚ್. ಕೆ. ಸಿದ್ದಯ್ಯ.—ಅಮಲ್ದಾರರು ಪಂಚಾಯಿತಿಯಿಂದ ಕಾಲುಭಾಗ ಹಣಕೊಡಬೇಕೆಂದು ಕೇಳಿದರು. ಸರ್ಕಾರದವರು ಪಂಚಾಯಿತಿ ಹಣ ಕೇಳದೆ ತಾವೇ ಬಾವಿ ತೆಗೆಸಲು ಏರ್ಪಾಡುಮಾಡುತ್ತಾರೆಯೇ ?

ಶ್ರೀ ಟಿ. ಚನ್ನಯ್ಯ.—ಈಗಾಗಲೆ 1,750 ರೂಪಾಯಿಗಳನ್ನು ಕೊಟ್ಟಿದೆ. ಬಲ್ಲುಪೇಟೆಯಲ್ಲಿ ಬಾವಿ ತೆಗೆಸುವುದರ ಜೊತೆಗೆ ಬನವಾಸಿಯಲ್ಲೂ ತೆಗೆಸುವುದು ಅವಶ್ಯಕವೆಂದರೆ ತೆಗೆಸೋಣ.

ಶ್ರೀ ಎಚ್. ಕೆ. ಸಿದ್ದಯ್ಯ.—ಈಗ ಮಂಜೂರಾಗಿರುವ ಬಾವಿ ತೆಗೆದಿಲ್ಲ, ಪಂಚಾಯಿತಿಯಿಂದ 400 ರೂಪಾಯಿ ಕೊಡಬೇಕೆಂದು ಅಮಲ್ದಾರರು ಕೇಳುತ್ತಿದ್ದಾರೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ತಾವು ಲೋಕಲ್ ಡೆವಲಪ್‌ಮೆಂಟ್ ಸ್ಕೀಂನಲ್ಲಿ ಮಂಜೂರಾಗಿರುವ ಹಣದ ವಿಚಾರ ಹೇಳುತ್ತಿರುವಂತೆ ಕಾಣುತ್ತದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಬೇಲೂರು, ಆಲೂರು, ಸಕಲೇಶಪುರ ಮುಂತಾದ ಗ್ರಾಮಗಳ ಒಂದು ಸಾವಿರ ಜನರಿಗೆ ನಾನು ಪ್ರಶ್ನೆಯಲ್ಲಿ ಕೇಳಿರುವ ಬಾವಿಯ ಆವಶ್ಯಕತೆ ಬಹಳವಾಗಿರುವುದರಿಂದ ಅದಕ್ಕೆ ಪೂರ್ತಿಯಾಗಿ ಸರ್ಕಾರದಿಂದ ಗ್ರಾಂಟನ್ನು ಕೊಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಅದನ್ನು ಆಲೋಚನೆಮಾಡಿ ನೋಡುತ್ತೇವೆ.

Wells (Government) in Huliyurdurga villages

Q.—432. Sri N. HUCHMASTHY GOWDA (Huliyurdurga).—

Will the Government be pleased to state :—

(*a*) the number of villages where there are Government wells in Huliyurdurga ;

(*b*) the number of villages having only private wells ;

(*c*) the number of villages which have no wells at all (including *Dakhle* villages) ?

A.—Sri T. CHANNIAH (Minister for Public Health and Local Self-Government).—

(*a*) 28.

(*b*) 9.

(*c*) 25.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಕುಡಿಯುವ ನೀರಿನ ಬಾವಿಗಳಿಲ್ಲದೆ ತೊಂದರೆಯಾಗಿ ಐದಾರು ವರ್ಷಗಳಿಂದ ಅನೇಕ ಕಡೆಗಳವರು ಕೇಳುತ್ತಿಲ್ಲವೆ ?